KACD420016972023

## ಹೊಳಲ್ಕೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ

**ಸಿ.ಸಿ. ನಂಃ 1111/2023**

ಪಿರ್ಯಾದಿದಾರರು : ಸರ್ಕಾರದ ಪರವಾಗಿ–ಅಬಕಾರಿ ಉಪ ನಿರೀಕ್ಷಕರು
ಹೊಳಲ್ಕೆರೆ ವಲಯ, ಹೊಳಲ್ಕೆರೆ ಪೋಲೀಸ್ ಠಾಣೆ

ವಿರುದ್ಧ

ಆರೋಪಿ ಃ ಜೆ. ರಮೇಶ ಬಿನ್ ಜಯ್ಯಪ್ಪ

## ದೋಷಾರೋಪಣೆ

ಶ್ರೀ ಉಮೇಶ,ಎಂ.ಪಿ., ಬಿ.ಎ.ಎಲ್., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ಹೊಳಲ್ಕೆರೆ ಆದ ನಾನು

ಆರೋಪಿಃ ಜೆ. ರಮೇಶ ಬಿನ್ ಜಯ್ಯಪ್ಪ ,
ವಯಸ್ಸುಃ *25* ವರ್ಷಗಳು,
ವೃತ್ತಿಃ ಅಂಗಡಿ ಮಾಲೀಕ,
ವಾಸಃ ಹೊಳಲ್ಕೆರೆ ನಗರ,
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

ಆರೋಪಿತನಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕಃ08-05-2023 ರಂದು ಸಾಯಂಕಾಲ 6-15 ರ ಸಮಯದಲ್ಲಿ ಕರ್ನಾಟಕ ವಿಧಾನ ಸಭೆ ಚುನಾವಣೆ-2023 ರ ನೀತಿ ಸಂಹಿತೆ ಜಾರಿ ಹಿನ್ನಲೆಯಲ್ಲಿ ಹಾಗೂ ದಿಃ 10-05-2023 ರ ರಂದು ಮತದಾನ ನಡೆಯುವ ಹಿನ್ನಲೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಚಿತ್ರದುರ್ಗ ರವರ ಆದೇಶ ಸಂಖ್ಯೆ ಎಂಎ ಜೆ(3) ಸಿ ಆರ್. /01-2023-24 ದಿಃ 15-04-2023 ರಂತೆ ಮದ್ಯ ಮಾರಾಟದ ಒಣ ದಿನ ಘೋಷಣೆ ಮಾಡಿದ ಪ್ರಯುಕ್ತ

ವಲಯ ವ್ಯಾಪ್ತಿಯ ಎಲ್ಲಾ ಬಗೆಯ ಸನ್ನದುಗಳು ಬಂದ್ ಇರುವುದರಿಂದ ಮಾನ್ಯ ಅಬಕಾರಿ ಉಪ ಆಯುಕ್ತರು ಮತ್ತು ತಮ್ಮ ಸಿಬ್ಬಂದಿ ಗಸ್ತು ಮಾಡುತ್ತಿರುವಾಗ, ಖಚಿತ ಬಾತ್ಮೀ ಮೇರೆಗೆ ಹೊಳಲ್ಕೆರೆ ಟೌನ್ ನ ಗುದ್ದಲಿ ಬಸವರಾಜ ಬಡಾಬಣೆಯಲ್ಲಿರುವ ಆರೋಪಿತನಾದ ನೀನು ತನಗೆ ಸೇರಿದ ಬೀಡಾ ಅಂಗಡಿಯಲ್ಲಿ ಒಟ್ಟು 63.900 ಲೀಟರ್ ಮದ್ಯ ಹಾಗೂ 68.250 ಲೀಟರ್ ಬಿಯರ್ ಕಾನೂನು ಬಾಹಿರವಾಗಿ ಯಾವುದೇ ಪರವಾನಿಗೆಯನ್ನು ಹೊಂದದೇ ಅಕ್ರಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಮಾಡಿರುತ್ತೀರಿ. ಈ ನ್ಯಾಯಾಲಯದ ಸಂಜ್ಞೆಯೊಳಗೆ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರಿ.

ಈ ಮೇಲೆ ಹೇಳಿದ ಅದೇ ದಿನ ಸ್ಥಳ ವೇಳೆಯಲ್ಲಿ ಆರೋಪಿತನಾದ ನೀನು ಕಾನೂನು ಬಾಹಿರವಾಗಿ ಸಮಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೇ ಒಟ್ಟು 63.900 ಲೀಟರ್ ಮದ್ಯ ಹಾಗೂ 68.250 ಲೀಟರ್ ಬಿಯರ್ ನ್ನು ಅಕ್ರಮವಾಗಿ ಸ್ವಾಧೀನ ಹೊಂದಿ, ಕರ್ನಾಟಕ ಅಬಕಾರಿ ಕಾಯಿದೆ ಕಲಂ 14, 15 ಮತ್ತು 43 ನ್ನು ಉಲ್ಲಂಘನೆ ಮಾಡಿ ಕಲಂ 38(ಎ) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿದೆ.

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಹೊಳಲ್ಕೆರೆ.

ದಿ:28-10-2024